ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿ ಕಟ್ಟಡ ವಿಸ್ತರಣೆ

೫೩೬ (೧೪೧೧ ಎ) ಶ್ರೀ ನಾರಾಯಣರಾವ್ ಮನ್‌ಹಳ್ಳಿ (ಬೀದರ್).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿ ಕಟ್ಟಡದಲ್ಲಿ ೧೫೦ ಹಾಸಿಗೆಗಳು ರೋಗಿಗಳಿಗೆ ಸಾಕಾಗುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಹಾಲಿ ಇರುವ ಆಸ್ಪತ್ರೆಯ ಕಟ್ಟಡದ ಮೊದಲನೇ ಮಹಡಿಯ ಕಟ್ಟಡ ನಿರ್ಮಾಣವನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಸಾಮಾನ್ಯವಾಗಿ ಯಾವ ತರಹ ಸಚಿವರು ಉತ್ತರ ಕೊಡಬೇಕೋ, ಅದೇ ತರಹ ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಯಾವ ರೀತಿಯ ಉತ್ತರ ಕೊಡಬೇಕೋ ಆ ರೀತಿಯ ಉತ್ತರ ಕೊಡುವುದಕ್ಕೇ ಅವರು ಸಚಿವರಾಗಿರುವುದು.

ಶ್ರೀ ನಾರಾಯಣರಾವ್ ಮನಹಳ್ಳಿ.—ಸರ್ಕಾರ ಪರಿಶೀಲನೆ ಕಾರ್ಯರೂಪದಲ್ಲಿ ಎಂದು ಬರುತ್ತದೆಂಬುದನ್ನು ಕಾಲ ನಿಗದಿ ಮಾಡಿ ಹೇಳಬಹುದೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ಮಂಡಲಿಗೆ ಆರೋಗ್ಯ ಇಲಾಖೆಯಿಂದ ೬ ಕೋಟಿ ರೂಪಾಯಿಗಳನ್ನು ಕೊಡುವಂತಹ ಯೋಜನೆ ಇರುವುದರಿಂದ, ಈ ಆಸ್ಪತ್ರೆ ಕಟ್ಟಡಕ್ಕೆ ೧೯೯೦-೯೧ನೇ ಸಾಲಿಗಾಗಿ ೨೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—೨೦ ಲಕ್ಷ ರೂಪಾಯಿಗಳಲ್ಲಿ ಏನು ಕೆಲಸ ಮಾಡುವುದಕ್ಕಾಗುತ್ತದೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಆದರೆ ನೀವು ಏನು ಮಾಡಿದ್ದೀರಿ ? ನಾವು ಅಷ್ಟನ್ನಾದರೂ ಮಾಡಿದ್ದೇವೆ, ೬ ಕೋಟಿ ರೂಪಾಯಿಗಳನ್ನಾದರೂ ಒದಗಿಸಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಾನು ಏನು ಮಾಡಿದ್ದೇನೆಂಬುದನ್ನು ಅಲ್ಲಿನ ಜನಗಳನ್ನು ಕೇಳಿ. ಬೀದರ್ ಜಿಲ್ಲೆಗೆ ಹೋಗಿ ಕೇಳಿ. ಎಲ್ಲದಕ್ಕೂ ಹೀಗೆ ನೀವು ಏನು ಮಾಡಿದ್ದೀರಿ ಎಂದು ನಮ್ಮನ್ನು ಕೇಳುತ್ತೀರಿ. ಇದು ಸರಿಯೇ ?

ಅಧ್ಯಕ್ಷರು.—ಅವರು ನಿಮ್ಮನ್ನು ಕಾರಿತು ಹೇಳಿದ್ದಲ್ಲ. ನಾವು ಅಷ್ಟನ್ನಾದರೂ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನೀವು ಏನು ಮಾಡಿದ್ದೀರಿ ಎಂದು ಇದು ೩೬೫ ಸಾರಿ ಅ ು ಹೇಳುತ್ತಿರುವುದು. ಪ್ರತಿಯೊಂದು ವಿಚಾರಕ್ಕೂ ನೀವು ಏನು ಮಾಡಿದ್ದೀರಿ ಅಂದರೆ ನಾನು ಇಲ್ಲಿ ಸದಸ್ಯನಾಗಿ ಇದ್ದರೂ ಸಹ ಇಲ್ಲಿಂದ ಎದ್ದು ಹೊರಟು ಹೋಗಬೇಕೆ ? ಉಪ ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಪರ್ಮಿಷನ್ ಕೊಟ್ಟ ಮೇಲೆ ಅದನ್ನು ಕೇಳತಕ್ಕ ಹಕ್ಕು ನನಗೆ ಸಂಪೂರ್ಣವಾಗಿ ಇದೆ. ಮಾತೆತ್ತಿದರೆ ನೀವು ಏನು ಮಾಡಿದ್ದೀರಿ ಅಂತ ಕೇಳುವುದಾದರೆ, ಏನು ಮಾಡಿದ್ದೇವೆಂಬುದರ ಬಗ್ಗೆ ಚರಿತ್ರೆ ಹೇಳಬೇಕೇ ? ನಾನು ಹಾಗಿದ್ದರೆ ನಾನು ಹೇಳುತ್ತೇನೆ, ತಾವು ಕೇಳಿ, ೬ ವರ್ಷಗಳ ಕಾಲ

ಮಂತ್ರಿಯಾಗಿದ್ದೆ. ಬೀದರ್ ಜಿಲ್ಲೆಗೆ ಹೈದರಾಬಾದ್ ಕರ್ನಾಟಕ ಏರಿಯಾದ ಅಭಿವೃದ್ಧಿಗೆ ನಾನು ಕಮಿಟೆಡ್ ಆಗಿರತಕ್ಕ ವ್ಯಕ್ತಿ. ನನಗೆ ಆ ಮಾತನ್ನು ಹೇಳಬೇಡಿ. ಏನು ಮಾಡಿದ್ದೀನೆಂಬುದು ಆ ಜನರ ಹತ್ತಿರ ಕೇಳಿ. ಅವರು ಹೇಳುತ್ತಾರೆ. ನಿಮಗೆ ಗೊತ್ತಿಲ್ಲ. ರಾಯಚೂರು ಜಿಲ್ಲಾ ಆಸ್ಪತ್ರೆಗೆ ೨೦ ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ಆದಕ್ಕೆ ನಾ ೂ ಕಾರಣ ಇದ್ದೇನೆ. ಇದನ್ನು ಇಲ್ಲಿ ಬೇಕಾದರೂ ನಾನು ಹೆ ಳುತ್ತೇನೆ. ಆ ಬಗ್ಗೆ ಜನರೇ ಹೇಳುತ್ತಾರೆ. ದಯಮಾಡಿ ಬೀದರ್ ಜಿಲ್ಲೆಗೆ ಹೋಗಿ ಸಿಂಧ್ಯಾ ಏನು ಮಾಡಿದ್ದಾನೆ ಏಂದು ಕೇಳಿ. ಆ ಜನ ಹೇಳುತ್ತಾರೆ. ಇಂಡಿಯಾ ಪಾಪ್ಯುಲೇಷನ್ ಪ್ರಾಜೆಕ್ಟ್ ನಿಮ್ಮ ಸರ್ಕಾರ ಇದ್ದಾಗಲೇ ನಿಂತ್ತು ಹೋಗಿತ್ತ ನಾನು ಕೇಂದ್ರ ಸರ್ಕಾರಕ್ಕೆ ಹೋಗಿ, ಅಲ್ಲಿ ಕುಳಿತುಕೊಂಡು ಐ. ಪಿ. ಪಿ. ಪ್ರಾಜೆಕ್ಟ್‌ನ್ನು ಬೀದರ್, ಗುಲ್ಬರ್ಗ, ರಾಯಚೂರು, ಬಿಜಾಪುರ ಹಾಗೂ ಬೆಳಗಾಂ ಜಿಲ್ಲೆಗಳಿಗೆ ಬೇಕು ಅಂತ ಹೋರಾಟ ಮಾಡಿ ತೆಗೆದುಕೊಂಡು ಬಂದಿದ್ದೇನೆ. ನಮ್ಮ ಮುಖ್ಯಮಂತ್ರಿಗಳು ಹಣ ಇಲ್ಲ ಅಂತ ಹೇಳಿ. ಅವತ್ತು ಒಪ್ಪಿರಲಿಲ್ಲ ನಾನು ಹೋರಾಟ ಮಾಡಿ ೪೫ ಕೋಟಿ ರೂಪಾಯಿಗಳನ್ನು ೧೯೮೩-೮೪ನೇ ಇಸವಿಯಲ್ಲಿ ಮಂಜೂರು ಮಾಡಿಸಿದ್ದೇನೆ. ದಯವಿಟ್ಟು ಆ ರೀತಿ ಹೇಳಬೇಡಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೆ, ಬೀದರ್ ಬಹಳ ಹಿಂದುಳಿದಿರತಕ್ಕ ಜಿಲ್ಲೆ ಆದು. ೧೫೦ ಬೆಡ್ ಇರತಕ್ಕ ಆಸ್ಪತ್ರೆ. ಮೆಡಿಕಲ್ ಕಾಲೇಜು ಇರುವ ಕಡೆ ಆಸ್ಪತ್ರೆಗಳು ಜಾಸ್ತಿಯಾಗುತ್ತಿವೆ. ಮೆಡಿಕಲ್ ಕಾಲೇಜು ಇರುವ ಕಡೆ ಪ್ರತಿ ವರ್ಷ ೬೦ ಬೆಡ್, ೧೦೦ ಬೆಡ್ ೧೫೦ ಬೆಡ್ ಅಂತ ಅವರೂ ಮಾಡಿದರು. ನೀವೂ ಮಾಡುತ್ತಿದ್ದೀರಿ. ಆದನ್ನು ದಯಮಾಡಿ ಮಾಡುವುದಕ್ಕೆ ಹೇಗಬೇಡಿ. ಬೀದರ್ ಬಹಳ ಹಿಂದುಳಿದಿರತಕ್ಕ ಜಿಲ್ಲೆ. ೨೦ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಆದರಲ್ಲಿ ಏನು ಮಾಡುವುದಕ್ಕೆ ಸಾಧ್ಯ ? ಅದರಿಂದ ಇನ್ನೂ ೫೦ ಬೆಡ್ ಹೆಚ್ಚು ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಅಂತ ನಾನು ಕೇಳುತ್ತಿದ್ದೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ ಹಾಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೋಸ್ಕರ ನಮ್ಮ ಆರೋಗ್ಯ ಇಲಾಖೆಯಿಂದ ೬ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಆದರಲ್ಲಿ ಎಲ್ಲಾ ಭಾಗಗಳಿಗೂ ಕೊಡುವುದಾಗುತ್ತದೆ. ಹಾಗೂ ೧೯೯೦-೯೧ನೇ ಸಾಲಿನಲ್ಲಿ ಇದಕ್ಕೆ ೨೦ ಲಕ್ಷ ಒದಗಿಸಲಾಗಿದೆ. ಇದನ್ನು ಇಷ್ಟಕ್ಕೇ ಮುಗಿಸುವುದಿಲ್ಲ ಮುಂದಕ್ಕೆ ಕೂಡುತ್ತೇವೆ. ಈಗ ತಕ್ಷಣಕ್ಕೆ ೨೦ ಲಕ್ಷ ಒದಗಿಸಲಾಗಿದೆ.

ಅಧ್ಯಕ್ಷರು. ಒಂದು ವರ್ಷದಲ್ಲಿ ೨೦ ಲಕ್ಷ ಖರ್ಚಾದಮೇಲೆ ಪುನಃ ಕೊಡುತ್ತೀರಾ ?

ಶ್ರೀಮತಿ ಮನೋರಮ ಮಧ್ವರಾಜ್.—ಪುನಃ ನಾವು ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಆ ಗಡಿ ಪ್ರದೇಶ ಹಿಂದುಳಿದ ಭಾಗವಾಗಿದೆ. ಇದಕ್ಕೆ ೨೦ ಲಕ್ಷ ರೂಪಾಯಿ ಸಾಕೇ ಎಂದು ತಾವೇ ಹೇಳಿ ಅಧ್ಯಕ್ಷರೇ...

ಅಧ್ಯಕ್ಷರು.—ಬೀದರ್ ಜಿಲ್ಲಾ ಆಸ್ಪತ್ರೆಗೆ ಅದೇನೋ ೬ ಕೋಟಿ ರೂಪಾಯಿ ಎಂದು ಹೇಳಿದರು

ಶ್ರೀ ವಾಟಾಳ್ ನಾಗರಾಜ್.—ಅದೇನೋ ಒಬ್ಬರಾಯನ ಕತೆ ಹೇಳುತ್ತಿದ್ದಾರೆ.

ಶ್ರೀಮತಿ ಮನೋರಮ ಮಧ್ವರಾಜ್.—ಹೈದರಾಬಾದ್ ಕರ್ನಾಟಕ ಸಮಗ್ರ ಅಭಿವೃದ್ಧಿ ಯೋಜನೆಗೆ ಸೇರಿದಹಾಗೆ ಹೇಳಿದ್ದೇನೆ.

ಅಧ್ಯಕ್ಷರು.—ಅಂದರೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಚೌಕಟ್ಟಿನಲ್ಲಿ ೬ ಕೋಟಿ ರೂಪಾಯಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—೧೫೦ ಹಾಸಿಗೆ ಹೊಂದಿರುವ ಈ ಆಸ್ಪತ್ರೆಗೆ ಇನ್ನೂ ೫೦ ಬೆಡ್ ಹೆಚ್ಚು ಮಾಡಿ ಎಂದು ಕಳೆದ ೧೦ ವರ್ಷಗಳಿಂದ ಕೇಳುತ್ತಿದ್ದಾರೆ ನಿಮಗೆ ಮಾಡುವುದಕ್ಕೆ ಆಗದೇ ಇದ್ದರೆ, ನಾನು ಒಂದು ಸಲಹೆ ಕೊಡುತ್ತೇನೆ. ಕೇಂದ್ರ ಸರ್ಕಾರದಿಂದ ಬರತಕ್ಕ ಬಿಷ್ಟರೋಗ ನಿವಾರಣೆಗೋ ಅಥವಾ ಟ್ಯೂಬರ್‌ಕ್ಯುಲೋಸಿಸ್‌ಗೊ ಬರುವ ಫಂಡ್‌ನ್ನು ತೆಗೆದುಕೊಂಡು ಅಲ್ಲಿ ಕೊಡಲೇ ೨೫ ಬೆಡ್‌ಗಳನ್ನು ಜಾಸ್ತಿ ಮಾಡುವ ಆಶ್ವಾಸನೆಯನ್ನಾದರೂ ಈ ದಿನವೇ ಕೂಡಿ.

ಅಧ್ಯಕ್ಷರು.—ಆಶ್ವಾಸನೆಯನ್ನು ಯೋಚನೆ ಮಾಡಿ ಕೊಡಿ.

ಶ್ರೀಮತಿ ಮನೋರಮ ಮಧ್ವರಾಜ್.—ಏಕೆಂದರೆ ಆ ಅಭ್ಯಾಸ ಅವರಿಗೆ ಉಂಟು. ಹಿಂದೆ ನೀವು ಹಿಂದೆ ಯಾವುದಕ್ಕೋ ಬಂದ ಹಣವನ್ನು ಬೇರೆ ಯಾವುದಕ್ಕೋ ಉಪಯೋಗ ಮಾಡಿದ್ದೀರಿ.

ನಾವು ಆ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ಯಾವುದಕ್ಕೆ ಹಣ ಬರುತ್ತದೋ ಅದಕ್ಕೇ ನಾವು ಉಪಯೋಗ ಮಾಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಆಗಿದ್ದರೆ ನಾವು ಯಾವುಯಾವುದಕ್ಕೆ ಉಪಯೋಗಿಸಿದ್ದೇವೆಂದು ತಾವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ಅದರ ಬಗ್ಗೆ ನಮಗೆ ಮಾಹಿತಿ ಬೇಕಾಗುತ್ತದೆ. ಯಾವುದನ್ನು ಯಾವುದಕ್ಕೆ ಎಷ್ಟು ಖರ್ಚು ಮಾಡಿದ್ದಾರೆಂದು ತಾವು ಹೇಳಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಮಂತ್ರಿಗಳು ಜವಾಬ್ದಾರಿ ಸ್ಥಾನದಿಂದ ಉತ್ತರ ಕೂಡ ಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಅವರ ಅರ್ಥ ಏನೆಂದರೆ, ನಾವು ಯಾವುದಕ್ಕೂ ಉಪಯೋಗ ಮಾಡುವುದಿಲ್ಲ, ಸರಿಯಾಗಿ ಉಪಯೋಗ ಮಾಡುತ್ತೇವೆಂದು ಹೇಳುತ್ತಿದ್ದಾರೆಯಷ್ಟೇ. ಹೇಳುವ ಭಾಷೆಯಲ್ಲಿ...

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ತರಹ ನಾವು ಯಾವುಯಾವುದಕ್ಕೋ ಉಪಯೋಗಿಸುವುದಿಲ್ಲ ಎಂದು ಹೇಳಿದರು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಗೆ ಮೊದಲನೆಯ ದಿವಸ ಬಂದಾಗ ಮಾನ್ಯ ಆರೋಗ್ಯ ಸಚಿವರಿಗೆ ಕೆ ಎಫ್ ಡಿ ವ್ಯಾಕ್ಸೀನ್ ಬಗ್ಗೆ ಬಹಳ ಕಳಕಳಿಯಿಂದ ಎತ್ತಿದ ಪ್ರಶ್ನೆಗೆ ಕೂಡಾ ಇದೇ ರೀತಿಯ ಉತ್ತರ ಬಂತು, ನೀವು ಏನು ಮಾಡಿದ್ದೀರಿ ಎಂದರೆ ಹೇಗೆ? ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು.—ನಾನು ನಿಮ್ಮ ರಕ್ಷಣೆಗೆ ಬಂದಿದ್ದೇನೆ. ನಾನು ನಿಮ್ಮ ರಕ್ಷಣೆಗೆ ಬರಬಾರದು ಎಂದಿದ್ದರೆ ನಿಮಗೆ ಮಾತನಾಡುವುದಕ್ಕೆ ಕರೆಯುತ್ತಲೇ ಇರಲಿಲ್ಲ. ನಾನು ನಿಮ್ಮನ್ನು ಕರೆದಿರುವುದೇ ರಕ್ಷಣೆ ಕೊಡುವುದಕ್ಕೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅದಕ್ಕಾಗಿ ಧನ್ಯವಾದಗಳು. ಪ್ರತಿ ಸಾರಿ ನೀವು ಏನು ಮಾಡಿದ್ದೀರಿ ಎಂದು ಕೇಳುತ್ತಾರೆ. ನಾವು ಏನು ಮಾಡಿದ್ದೇವೆ, ಏನು ಮಾಡಿಲ್ಲ ಎನ್ನುವುದನ್ನು ಜನರು ಹೇಳುತ್ತಾರೆ. ಯಾವುಯಾವುದಕ್ಕೆ ಹಣವನ್ನು ದುರುಪಯೋಗ ಮಾಡಿದ್ದೇವೆ? ಆ ದುಡ್ಡನ್ನು ದುರುಪಯೋಗ ಮಾಡಿ ಬೇರೆ ಏನೇನಕ್ಕೋ ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ. ಆ ಬಗ್ಗೆ ಬೇಕಾರೆ come out with statistics. Come on tell me.....೨೪ ಗಂಟೆಗಳ ಟೈಮ್ ತೆಗೆದುಕೊಳ್ಳಲಿ ಅದು ಸಾಲದಿದ್ದರೆ ಅವರಿಗೆ ಮೂರು ದಿನದ ಸಮಯ ಕೊಡಿ.

ಅಧ್ಯಕ್ಷರು.—ಆಲ್ ರೈಟ್. ಅವರಿಗೆ ಮೂರು ತಿಂಗಳ ಸಮಯ ಕೊಟ್ಟಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನನ್ನ ಆರೂವರೆ ವರ್ಷಗಳ ಮಂತ್ರಿ ಪದವಿಯಲ್ಲಿ ಅಥವಾ ನಾನು ಆರೋಗ್ಯ ಇಲಾಖೆ ನಿಭಾಯಿಸಿಕೊಂಡಿದ್ದಾಗ ನಾವು ಈ ರೀತಿ ಏನು ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಲಿ.

ಶ್ರೀ ಕೆ. ಲಕ್ಕಪ್ಪ.—ಏಕೋ ಸಿಂಧ್ಯಾ ಅವರಿಗೆ ಕೋಪ ಬಂದಿರುವಹಾಗೆ ಕಾಣುತ್ತದೆ.

ಅಧ್ಯಕ್ಷರು.—ನನ್ನ ಆಸಂಭವಕ್ಕೆ ಬಂದಹಾಗೆ ಸರ್ಕಾರ ಅದಲು ಬದಲು ಆದಾಗ ಯಾವಗಲೂ ಮೊದಲು ಆರೇಂಟು ತಿಂಗಳುಗಳಲ್ಲಿ ಈ ರೀತಿ ಸಹಜವಾಗಿರುತ್ತದೆ. ನೀವು ಏನು ಮಾಡಿದಿರಿ, ಅವರು ಏನು ಮಾಡಿದರು ಎಂದು ಹೇಳಿ. ಆದುದರಿಂದ ಮುಂದಿನ ಅಧಿವೇಶನದ ಹೊತ್ತಿಗೆ ಇದೆಲ್ಲಾ ಸರಿಹೋಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಅಪ್ಲಿಕೇಷನ್ ಇಲ್ಲದೇ ತಾವು ಟೆಂಪರರಿ ಇಂಜಂಕ್ಷನ್ ಕೊಟ್ಟರೆ ಹೇಗೆ? ಅರ್ಜಿ ಆದರೂ ಬರಬೇಕು.

ಶ್ರೀ ವಾಟಾಳ್ ನಾಗರಾಜ್.—ನೀವು ಹಾಗೆ, ಅವರು ಹಾಗೆ ಎಂದು ಇವರಿಬ್ಬರು ಮಾತನಾಡುತ್ತಿದ್ದು ಇವರ ಮಧ್ಯೆ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಇವರಿಂದ ನಮಗೆ ಕಷ್ಟವಾಗಿದ್ದು ನೀವು ನಮಗೆ ರಕ್ಷಣೆ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ. ಈಗ ಗೈರುಹಾಜರಿದ್ದ ಸದಸ್ಯರ ಹೆಸರನ್ನು ಮತ್ತೊಮ್ಮೆ ಕರೆಯುತ್ತೇನೆ. ಈಗ ಗೋಪಾಲ ಮುಕುಂದ ಕಾನಡೆಯವರ ಪ್ರಶ್ನೆ.

ಸಿರ್ಸಿ ಸಿದ್ದಾಪುರ ತಾಲ್ಲೂಕುಗಳಲ್ಲಿ ಅರಣ್ಯ ಭೂಮಿಯು ಅತಿಕ್ರಮಣ ಮಾಡಿರುವ ಬಗ್ಗೆ

೫೧೭(೧೪೫೮) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅರಣ್ಯ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ೧೦ ಎಕರೆಗಳಿಗಿಂತಲೂ ಮಿಕ್ಕಿ ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅತಿಕ್ರಮಣದಾರರ ಹೆಸರು ಹಾಗು ವಿವರ ಒದಗಿಸುವುದು?

ಇ) ಅತಿಕ್ರಮಣ ಮಾಡಿದ್ದರೆ, ಅಂತಹವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಬಿ. ಬಸವಲಿಂಗಪ್ಪ (ಪಶು ಸಂಗೋಪನೆ ಮತ್ತು ಅರಣ್ಯ ಸಚಿವರು).—

ಅ) ಹೌದು.

ಆ) ವಿವರ ಪಟ್ಟಿಯಲ್ಲಿ ಒದಗಿಸಿದೆ.

ಇ) ದಿನಾಂಕ: ೨೭–೪–೭೮ರ ನಂತರದ ಅತಿಕ್ರಮಣ ಪ್ರಕರಣಗಳಿಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಉಚ್ಚಾಟನೆ ಮಾಡಲಾಗುವುದು.

ಶಿರಸಿ ಅರಣ್ಯ ವಿಭಾಗದಲ್ಲಿ ೧೦ ಎಕರೆಗಿಂತಲೂ ಹೆಚ್ಚು ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿದ ವಿವರ.

ಅ ಸಂ ೧	ಅತಿಕ್ರಮಣದಾರರ ಹೆಸರು ೨	ಗ್ರಾಮ ೩	ಫಾ.ಸ.ನಂ ೪	ಕ್ಷೇತ್ರ ೫
೧)	ಶ್ರೀ ಗುರುಪಾದ ಮಂಜುನಾಥ	ಬೊಮ್ಮನಳ್ಳಿ	೬	೧೫–೦೦
೨)	ಶ್ರೀ ರಮಣಿಕೋಂ ಜನಾರ್ಧನ ಕಾರ್ಕಾಡ	ಹನುಮಂತಿ	೨೦	೧೦–೦೦
೩)	ಶ್ರೀ ಮಾಬ್ಲೇಶ್ವರ ಸುಬ್ರಾಯ ಭಟ್ಟ	ಬುಗಡಿ	೩	೬–೨೨–೦
			೪	೪–೦೦–೦
			೮	೧–೦೫–೦
				೧೧–೨೭–೦
೪)	ಶ್ರೀ ವೆಂಕಟ್ರಮಣ ಗೋವಿಂದ ಹೆಗಡೆ	ಹೆಬ್ರಿ	೧೮೪	೩–೩೬–೦
			೧೮೫	೬–೨೬–೦
				೧೦-೨೨–೦
೫)	ಶ್ರೀ ಗಣಪತಿ ರಾಮಕೃಷ್ಣ ಭಟ್ಟ	ಮುಳ್ಳಂಡ	೮೪	೩೫–೨೬–೦
೬)	ಶ್ರೀ ವಿಷ್ಣು ಗಣಪತಿ ಭಟ್ಟ	ಬೆಳಗಾಪ	೮೭	೧೧–೦–೦೦